**ದಿನಾಂಕ :05–12–2020ರಂದು ಶನಿವಾರ ಬೆಳಗ್ಗೆ 11:00 ಘಂಟೆಗೆ ತಲಕಾವೇರಿ ಬಡಾವಣೆಯ ಉಮಾಮಹೇಶ್ವರಿ ಭವನದಲ್ಲಿ ವಾರ್ಡ್ ಸಂಖ್ಯೆ:87ರ, ಶ್ರೀ.ವಿಜಯ ಕುಮಾರ್ ಸಹಾಯಕ ಕಾರ್ಯಪಾಲಕ ಅಭಿಯಂತರರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಹಾಜರಿದ್ದ ಅಧಿಕಾರಿಗಳು :**

| | |
|---|---|
| 1. | ಶ್ರೀ.ಹೆಚ್.ಚಂದ್ರಪ್ಪ (ಸಹಾಯಕ ಅಭಿಯಂತರರು) |
| 2. | ಶ್ರೀ. ರಾಘವೇಂದ್ರ ಕೆ.ವಿ, ಹಿರಿಯ ಆರೋಗ್ಯ ಪರಿವೀಕ್ಷಕರು |
| 3. | ಶ್ರೀ.ರಂಗನ್ನಾಥ.ಎನ್ ಕಿರಿಯ ಆರೋಗ್ಯ ನಿರಿಕ್ಷಕರು |
| 4. | ಶ್ರೀ.ಸಂಜಯ್.ಎಸ್ (ಸ.ಅ, ವಿದ್ಯುತ್ ವಿಭಾಗ) |
| 5. | ಕೃಷ್ಣಪ್ಪ (ಕಂಟ್ರಾಕ್ಟರ್) |
| 6. | ಮಹೇಶ್ |
| 7. | ಸ್ವಸ್ತಿಕ್ ಮಣಿ |
| 8. | ಎಂ.ಎಸ್.ಬಾಲ ಸುಬ್ರಮಣ್ಯ |
| 9. | ಪಿ.ಸುರೇಂದ್ರನ್ |
| 10. | ನಿವಾಸಿ ಕ್ಷೇಮಾಭಿವೃದ್ದಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು |

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಫೇರ್ ಆಸೋಸಿಯೆಷನ್‌ನ ಅಧ್ಯಕ್ಷರುಗಳು, ಪ್ರತಿನಿದಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ಪ್ರಪಂಚದಾದ್ಯಂತ ಕೋವಿಡ್-19 ಮಹಾಮಾರಿ ರೋಗವು ಹರುಡುತ್ತಿರುವುದು ಗಮನಾರ್ಹವಾಗಿ ಕಡಿಮೆಯಾಗಿರುವದನ್ನು ಸಭೆಯ ಗಮನಕ್ಕೆ ತರುತ್ತಾ ಯಾವುದೇ ಕಾರಣಕ್ಕೂ ಸಾರ್ವಜನಿಕ ಪ್ರದೇಶಗಳಲ್ಲಿ ಮುಖ ಗವಸು ಇಲ್ಲದೇ ಅಂತರ ಕಾಯ್ದುಕೊಳ್ಳದೇ ಇರಬಾರದೆಂದು ಕಾಲಕಾಲಕ್ಕೆ ಸ್ಯಾನಿಟೈಸರ್ಸ್‌ಗಳನ್ನು ಉಪಯೊಗಿಸಿಕೊಂಡು ಮಹಾಮಾರಿ ರೋಗದಿಂದ ದೂರವಿರಲು ಕೋರಲಾಯಿತು ಹಾಗೂ ಸ್ಥಳೀಯ ನಿವಾಸಿ ಕ್ಷೇಮಾಬಿವೃದ್ಧಿ ಸಂಘಗಳು ಈ ದಿಸೆಯಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ಉಂಟು ಮಾಡುವಂತೆ ಕೊರಲಾಯಿತು.

ಕ್ರಮ:ಹಿರಿಯ ಆರೋಗ್ಯ ನಿರೀಕ್ಷಕರು



Scanned with CamScanner

ಶ್ರೀ. ಮುರುಗ ರವರು ಮಾತನಾಡಿ ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ರಮೇಶ್ ನಗರ 18ನೇ ಕ್ರಾಸ್, 1ನೇ ಮೇನ್ ಹೆಚ್.ಎ.ಎಲ್ ರೋಡ್‌ನ ಬಳಿ ನೀರಿನ ಪೈಪ್ ಲೈನ್ ಒಡೆದಿದ್ದು, ನೀರು ತುಂಬಾ ತ್ಯಾಜ್ಯವಾಗುತ್ತಿದ್ದು, ಅದುದರಿಂದ ಈ ಕೂಡಲೇ ಪೈಪ್ ಲೈನ್ ಸರಿಪಡಿಸಲು ಕೋರಿದರು.

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ವಿಭೂತಿಪುರದ ಮುಖ್ಯ ರಸ್ತೆಯ ಪಾದಚಾರಿ ಮಾರ್ಗದಲ್ಲಿ ತಳ್ಳು ಗಾಡಿಯವರು ರಸ್ತೆ ಮತ್ತು ಪುಟ್‌ಪಾತ್‌ನಲ್ಲಿ ನಿಲ್ಲಿಸಿ ವ್ಯಾಪಾರ ಮಾಡುತ್ತಿರುವ ಕಾರಣ ಟ್ರಾಫಿಕ್ ಸಮಸ್ಯೆಯಾಗುತ್ತಿರುವುದನ್ನು ಸಭೆಯ ಗಮನಕ್ಕೆ ತಂದು, ಈ ದಿನ ಕರ್ನಾಟಕ ಬಂಧ್ ಇರುವ ಕಾರಣ ರಸ್ತೆಯಲ್ಲಿ ವಾಹನ ದಟ್ಟಣೆ ಕಾಡಿಮೆ ಇರುವುದರಿಂದ ಈ ದಿನವೆ ಪುಟ್‌ಪಾತ್ ತೆರವುಗೊಳಿಸಲು ಕೋರಿದರು.

ಕ್ರಮ:ವಾರ್ಡ್ ಅಭಿಯಂತರರು ಮತ್ತು
ಟ್ರಾಫಿಕ್ ಪೋಲಿಸ್

ಶ್ರೀ.ಜೋ ಕುಮಾರ್ ರವರು ಮಾತನಾಡಿ ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಯೋಗ ಸೆಂಟರ್ ಬಳಿ ಕಸದ ತ್ಯಾಜ್ಯ ವಸ್ತುಗಳ ರಾಶಿ ಇರುವುದನ್ನು ಕೂಡಲೇ ತೆರವುಗೊಳಿಸಲು ಕೋರಿದರು.

ಅನ್ನಸಂದ್ರ ಪಾಳ್ಯ 4ನೇ ಅಡ್ಡ ರಸ್ತೆಯಲ್ಲಿ ಒಳಚರಂಡಿ ತುಂಬಾ ಅಳಾಗಿದ್ದು ದುರಸ್ಥಿ ಗೊಳಿಸಲು ಸೂಚಿಸಿದರು.

ಕ್ರಮ:ವಾರ್ಡ್ ಅಭಿಯಂತರರು ಮತ್ತು
ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಬಿ.

ಈ ದಿನದ ಸಭೆಗೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ಕಡಿಮೆ ಹಾಜರಾಗಿರುತ್ತಾರೆ, ಮುಂದಿನ ಸಭೆಗೆ ಸಂಬಂಧ ಪಟ್ಟ ಅಧಿಕಾರಿಗಳನ್ನು ತಪ್ಪದೆ ಅಹ್ವಾನಿಸಿಲು ನೋಡೆಲ್ ಅಧಿಕಾರಿಗಳು ಸೂಚಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.87 ಹೆಚ್.ಎ.ಎಲ್ ಏರ್‌ಪೋರ್ಟ್

ವಾರ್ಡ್ ಸಮಿತಿ ಅಧ್ಯಕ್ಷಕರು ಹಾಗೂ
ನೋಡೆಲ್ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಬಿಬಿಎಂಪಿ, ಮಹದೇವಪುರ ವಲಯ ರವರ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ತೋಟಗಾರಿಕೆ ಅಧೀಕ್ಷಕರು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ.
4. ಕಂದಾಯ ಅಧಿಕಾರಿಗಳು/ಸಹಾಯಕ ಕಂದಾಯ ಅಧಿಕಾರಿಗಳು/ನಿರೀಕ್ಷಕರು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
5. ಕಲ್ಯಾಣ ಶಾಖೆ ಅಧಿಕಾರಿಗಳು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.



Scanned with CamScanner

6. ಎಸ್.ಡಬ್ಲ್ಯೂ.ಎಂ, ಅಧಿಕಾರಿಗಳು/ಗುತ್ತಿಗೆದಾರರು, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ 9ನೇ ಮಹಡಿ, ಬೆಂಗಳೂರು–11.
7. ವಿದ್ಯುತ್ ವಿಭಾಗದ, ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
8. ಆರೋಗ್ಯ ಅಧಿಕಾರಿಗಳು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
9. ಸಹಾಯಕ ನಿರ್ದೇಶಕರು ಪಶುಪಾಲನೆ ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
10. ಬಿ.ಡಬ್ಲ್ಯೂ.ಎಸ್.ಎಸ್.ಬಿ, ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
11. ಟ್ರಾಫೀಕ್/ಸಿವಿಲ್ ಪೋಲಿಸ್, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
12. ರೆಸಿಡೆನ್ಸ್ ವೆಲ್‌ಫೇರ್ ಆಸೋಸಿಯೇಷನ್ಸ, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
13. ವಾರ್ಡ್‌ಗೆ ಸಂಬಂಧಿಸಿದ ಎನ್.ಜಿ.ಓ ಗಳು ಹೆಚ್.ಎ. ಎಲ್ ಏರ್‌ಪೋರ್ಟ್ ವಾರ್ಡ್.
14. ವಾರ್ಡ್‌ಗೆ ಸಂಬಂಧಿಸಿದ, ಎಸ್.ಸಿ/ಎಸ.ಟಿ ಸಂಘಟನೆಗಳು.
15. ವಾರ್ಡ್‌ನ ಆಸಕ್ತಿಯುಳ್ಳ ವಾಲೆಂಟಿಯರ್ಸ್.

Scanned with CamScanner